ಮಾತನಾಡುತ್ತಾರೆಂದರೆ...

ಅಷ್ಟೊತ್ತಿಗೆ ಆ ದೊಸ್ತ ಶಿವನ ನೆಂಟರು ಊಟಕ್ಕೆ ಕರೆಯಲು ಬಂದರು. ಮನೆಯ ಹತ್ತಿರವೇ ಇದ್ದ ಆ ನೆಂಟರಿಗೆ ಇಲ್ಲಿಯ ಕೋಲಾಹಲ ಗೊತ್ತಿದ್ದಂತಿರಲಿಲ್ಲ. 'ಹೇಗಾದರು ಮಾಡಿ ಸುಧಾರಿಸಿಕೊಳ್ಳಿ' ಎನ್ನುತ್ತ ಅವರು ಹೋದರು.

ನಂತರ ಹೆಗಡೆಯವರು ಹಿತ್ತಲ ಕಡೆ ಹೋಗಿ ಗೋಳೊ ಎಂದು ಅಳತೊಡಗಿದರು. ಬಹುಶಃ ಅವರಿಗೆ, ತಾನು ಇಷ್ಟೆಲ್ಲ ಮೆರೆದಾಡಿದ್ದು, ಪಾಳೆಗಾರನಂತೆ ಆಳಿದ್ದು, ಈಗ ತನ್ನ ಮಕ್ಕಳೆ ಎದುರು ನಿಲ್ಲಬಹುದೆಂದು ಅನಿಸಿರಲಿಲ್ಲ. ಅಳುತ್ತ ಕೂತಿದ್ದು ಉಳಿದವರಿಗೆ ಮೊದಲು ಗೊತ್ತಾಗಲಿಲ್ಲ. ಉಳಿದವರು ಮೌನವಾಗಿ ಊಟ ಮಾಡಿದರು, ಹೆಗಡೆಯವರು ಕಡೆಗೆ ಊಟ ಮಾಡಬಹುದೆಂದು.

ಕಮಲಮ್ಮ ಹೋಗಿ ಗಂಡನನ್ನು ಕರೆದಳು. 'ನಾ ಊಟ ಮಾಡುವುದಿಲ್ಲ, ವಸ್ತ್ರ ತಕಂಡ ಬಾ. ನಾ ಇಲ್ಲಿಂದಲೆ ಎಲ್ಲಿಗಾದರೂ ಹೋಗುತ್ತೇನೆ' ಎಂದು ರಂಪಾಟ ಶುರುಮಾಡಿದರು.

ಅಷ್ಟರಲ್ಲಿ ಶಂಭು ಊಟ ಮಾಡಿ ಅಪ್ಪನಿದ್ದಲ್ಲಿಗೆ ಹೋದ. ಇನ್ನು ಬಿಗಿದುಕೊಂಡಿದ್ದರೆ ಆಗುವುದಿಲ್ಲ ಎಂದು. 'ಆದದ್ದು ಆಯ್ತು, ಮುಂದೆ ನಮಗೆಲ್ಲ ದಾರಿ ತೋರ ಬೇಕಾದವ, ನೀನೇ ಹೀಗೆ ಮಾಡಿದರೆ ಹೇಗೆ?' ಎಂದು ಅಪ್ಪನ ತಲೆ ನೇವರಿಸಿದ.

ಅವನಿಗೆ ಒಂದು ತರಹದ ಮುಜುಗರ. ಹುಟ್ಟಿ ಇಷ್ಟು ವರ್ಷವಾದರೂ, ಅವನು ಅವರ, ಅವರು ಅವನ ಮೈ ಮುಟ್ಟಿದ್ದಾಗಲಿ, ಪ್ರೀತಿಯಿಂದ ಮಾತಾಡಿದ್ದಾಗಲಿ ಇರಲಿಲ್ಲ. ಅಂಥ ಸಲಿಗೆ ಯಾವಾಗಲೂ ಕೊಟ್ಟವರಲ್ಲ. ತನ್ನ ಟೀವಿ ಠೇಂಕಾರದಿಂದ ಆಳಿದವರೇ ಹೊರತು ಆತ್ಮೀಯತೆಯಿಂದ ಅಪ್ಪಿಕೊಂಡವರಲ್ಲ. ಇದಕ್ಕೆ ಅಪವಾದ ಎಂಬಂತೆ ಒಮ್ಮೆ ಅಂಥ ಸಂದರ್ಭ ಬಂದಿತ್ತು. ಅದು ಶಂಭು ಓದಲು ಧಾರವಾಡಕ್ಕೆ ಹೋದಾಗ. ಅವನ ಜೊತೆಗೆ, ರೂಮಿನಲ್ಲಿ, ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ, ತಣ್ಣಗೆ ಮೈ ಕೊರೆವ ಜಿಟಿಜಿಟಿ ಮಳೆಯಲ್ಲಿ ಓಡಾಡಿದ್ದು, ಸಂಜೆ ಅವನನ್ನೂ ಬಾರಿಗೆ ಕರೆದೊಯ್ದು, 'ಬೇಕಾದ್ರೆ ನೀನೂ ಬೀರು ಕುಡಿ... ಊಟ ಆಸರಿಗೆಲ್ಲ ದುಡ್ಡಿನ ಮುಖ ನೋಡುವ ಸ್ಥಿತಿಯೇನು ನಮಗಿಲ್ಲ. ನಾನು ಕುಡಿಯುವುದನ್ನು ಕಡಿಮೆ ಮಾಡಿದರೆ ಆ ದುಡ್ಡಲ್ಲಿ ನೀನು ಆರಾಮಾಗಿ ಕಲಿಯಬಹುದು!' ಎಂದೆಲ್ಲ ಹೇಳಿದ್ದರು. ಶಂಭುವಿಗೆ ಆಗಲೇ, ತಾನು ಕಲಿತು ಕಡದು ಇಳಿಸುವುದು ಅಷ್ಟರಲ್ಲೆ ಇದೆ ಅನಿಸಿದ್ದರೂ ಅವರ ಪ್ರೀತಿ ವಾತ್ಸಲ್ಯ ಕಣ್ಣು ಒದ್ದೆಯಾಗುವ ಹಾಗೆ ಮಾಡಿತ್ತು.

ನಂತರ ಅಲ್ಲೆಲ್ಲ ಕೆಲಸ ಮುಗಿಸಿಕೊಂಡು ಮಾರನೆ ದಿನ ಸಂಜೆ ಊರಿಗೆ ಹೊರಟರು. ಹೊನ್ನಾವರಕ್ಕೆ ಬರುವಾಗ ರಾತ್ರಿಯಾಗಿತ್ತು. ಅಷ್ಟೊತ್ತಿಗೆ ಇಪ್ಪತ್ತು ಇಪ್ಪತ್ತೈದು ಕಿಲೋ ಮೀಟರ ದೂರದಲ್ಲಿರುವ ಅವರೂರಿಗೆ ಬಸ್ ಇರಲಿಲ್ಲ. ಯಾವುದಾದರೂ ವಾಹನ ಹಿಡಿದು ಹೋದರೂ, ಅಲ್ಲಿ ಹೋದ ಮೇಲೆ ದೋಣಿ ದಾಟಬೇಕು, ಕತ್ತಲೆ ದಾರಿಯಲ್ಲಿ ನಡೆಯಬೇಕು ಮನೆ ಮುಟ್ಟಲು. ಹೀಗಾಗಿ ಹೆಗಡೆಯವರು, 'ಇಲ್ಲೆ ಹತ್ತಿರ ಊರಲ್ಲಿ ಒಬ್ಬರ ಮನೆಯಿದ್ದು ನನಗೆ ರಾಶಿ ಬೇಕಾದವರು, ಅಲ್ಲಿಗೆ ಹೋಪೊ' ಎಂದು ಕರೆದುಕೊಂಡು ಹೋದರು. ಅದು ಅವರ ಪ್ರೇಯಸಿಯ ಮನೆ! ಶಂಭುವಿಗೆ ಮೊದಲೇ ಬಗಬಗೇಲಿ ಗೊತ್ತಿತ್ತು. ಸರಿ, ಅಲ್ಲಿ ಹೋಗಿ ಊಟ ಮಾಡಿದರು. ಅವನಿಗೆ ಹೊರಗೆ ಹಸೆ ಬಿಚ್ಚಿ ಕೊಟ್ಟರು. ಹೆಗಡೆಯವರು ಒಳಗೆ ಮಲಗಿದರು. ರಾಶಿ ಸಾಕಾಗಿದ್ದರಿಂದಲೊ ಏನೊ ಮಲಗಿದ ಕೂಡಲೇ ನಿದ್ರೆ ಬಂದಿತ್ತು ಅವನಿಗೆ. ಬೆಳಿಗ್ಗೆ ಎದ್ದು ಚಾ ಕುಡಿದು ಊರಿಗೆ ಹೊರಟರು.